UASB
LIBRARY
Newspaper Clippings



Pg .1 Sunday 21-02-2021 Jai Kisan

ಬಿ.ಸಿ.ಪಾಟೀಲ್‌ರಿಂದ ಕಬ್ಬು ನಾಟಿ

ಕೃಷಿ ಚಟುವಟಿಕೆಗಳ ಪರಿಶೀಲನೆ | ಇಡೀ ದಿನ ರೈತರ ಜತೆ ಸುತ್ತಾಟ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಕಬ್ಬು ನಾಟಿ ಮಾಡಿದ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು, ರೈತರೊಂದಿಗೆ ಟ್ರಾ ್ಯಕ್ಟರ್ ಏರಿ ಸವಾರಿ ಮಾಡಿದರು. ಜತೆಗೆ ಜೋಳದ ಹೊಲದಲ್ಲಿ ಹಕ್ಕಿಗಳನ್ನು ಓಡಿಸಿ ಅನ್ನದಾತರೊಂದಿಗೆ ಬೆಳೆಗಳ ನಡುವೆ ಹೆಜ್ಜೆ ಹಾಕಿದರು.

ಸರ್ಕಾರದ ಮಹತ್ವಾಕಾಂಕ್ಷಿ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದ ಭಾಗವಾಗಿ ಶನಿವಾರ ಬಸವ ಕಲ್ಯಾಣ ತಾಲೂಕಿನ ವಿವಿಧ ಗ್ರಾಮಗಳಲ್ಲಿ ರೈತರೊಂದಿಗೆ ಬೆರೆತು ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡರು. ಅವರ ಸಮಸ್ಯೆಗಳನ್ನು ಆಲಿಸಿ, ಶೀಘ್ರ ಪರಿಹಾರದ ಭರವಸೆ ನೀಡಿದರು. ಇದಕ್ಕೂ ಮುನ್ನ, ತಾಲೂಕಿನ ಧನ್ನೂರ(ಕೆ) ಗ್ರಾಮಕ್ಕೆ ಆಗಮಿಸಿದ ಸಚಿವರು ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದರು. ಬಳಿಕ ಗ್ರಾಮದ ಶಂಕರ ಬಿರಾದಾರ ಎಂಬುವರ ಗದ್ದೆಯಲ್ಲಿ ಕಬ್ಬು ನಾಟಿ ಮಾಡಿ, ಇಳುವರಿಯ ಬಗ್ಗೆ ಮಾಹಿತಿ ಪಡೆದರು. ನಂತರ ಬಾಲಾಜಿ ಪಾಟೀಲ್ ಎಂಬುವರ ಹೊಲದಲ್ಲಿ ಟ್ರಾ ್ಯಕ್ಟರ್‌ನಲ್ಲಿ ಸವಾರಿ ಮಾಡಿದ ಅವರು, ರಸಗೊಬ್ಬರ ಮತ್ತು ಪೋಷಕಾಂಶ ಸಿಂಪಡಣೆ ಮಾಡಿದರು.



ಬಸವಕಲ್ಯಾಣ ಧನ್ನೂರ (ಕೆ) ಗ್ರಾಮದ ಜೋಳದ ಹೊಲದಲ್ಲಿ ಹಕ್ಕಿ ಹೊಡೆಯುವ ವ್ಯವಸ್ಥೆಗೆ ಚಾಲನೆ ನೀಡಿದ ಕೃಷಿ ಸಚಿವ ಬಿ.ಸಿ.ಪಾ

For more information visit
University Library Website
Web - uasbagrilibindia.org
E-mail- librarian@uasbangalore.edu.in

21-02-2021 Kp Pg 11

State's first full-fledged private agri market to come up in Chitradurga

Will Be Set Up On The Lines Of APMCs

Anil.Gejji@timesgroup.com

Bengaluru: Even as nationwide protests by ryots against the three controversial farm laws continue, the state's first full-fledged private market on the lines of state-run Agricultural Produce Marketing Committees (APMCs) is set to come up at Hiriyur town in Chitradurga.

POLITICS & POLICY

Akshaya Food Park Limited, a private firm which has developed a food park at Hiriyur on 106 acres of land since 2010, got the licence in October 2020 to open a private market for trading of farm produce. The company is planning to operationalise it from April.

It's the first private company to get the licence after the APMC Act was amended by the government last year amid the Covid-19 pandemic, removing restrictions on farmers to sell their produce only at government-run APMC yards besides allowing private players to set up their own markets.

"We are in talks with traders (buyers) to get registered with our market so that we can start trading of agriculture produce from April. We are also publicising our market among farmers. Things are moving in the right direction and hopefully everything will proceed as per our plans," said M Narayanaswamy, managing director of Akshaya Food Park.

The firm is also mulling starting another market at Jewargi in Kalaburagi district. "We have another food park in Jewargi where we want to open a market. But it depends on how the Hiriyur market pans out," Narayanaswamy said. The firm has hired a consultant to understand the nitty-gritties of running a parallel market.

Meanwhile, several other private players have also shown interest in utilising the new business opportunity. Enquiries regarding setting up of private markets are increasing day by day but everyone is waiting for the ongoing confrontation between farmers and the central government to get over, according to an official from the department of agriculture marketing, "Since the Centre has offered to keep the three bills, including APMC bill, in abeyance for 18 months to negotiate with the protesting farmers, the private players are on a wait-and-watch mode," he added.

EXISTING MARKETS HANDLE LIMITED COMMODITIES

The state already has two private markets — one on Hosur Road, Bengaluru, which is run by Metro Cash & Carry and another at Ramanagara, operated by Bengaluru Merchants' Association. But they handle only some commodities. While Metro Cash & Carry which got the licence in 2013 deals with fruits, vegetables and other perishables, only mango trade happens in the Ramanagara market. But Akshaya Food Park is the first firm to get licence to trade in all the 92 commodities notified by the state government. "It is not that Karnataka is allowing private markets only after the Centre amended the model APMC Act last year. The state allowed private markets and contract farming by amending the APMC Act in 2007 itself. But since there was no demand, not many people knew about it," said an officer.

Photo for representation



ONE-STOP SHOP: The market in Hiriyur will enable trading of all farm produce

21-02-2021 Times of Ind Pg 05

UASB LIBRARY
Newspaper Clippings
Pg .2 Sunday 21-02-2021 Jai Kisan



ಮಳೆಗೆ ಅಪಾರ ಬೆಳೆ ನಷ್ಟ

ಕಾಫಿ, ಕರಿಮೆಣಸು, ಮಾವು, ದ್ರಾಕ್ಷಿ ಸೇರಿ 12 ಬೆಳೆ ಹಾನಿ

ಕೊಡಗು, ಹಾಸನದಲ್ಲಿ 700 ಎಕರೆ ಕಾಫಿ ತೋಟಕ್ಕೆ ನಷ್ಟ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕೊಡಗು, ಹಾಸನದಲ್ಲಿ ಭರ್ಜರಿ ಆಲಿಕಲ್ಲು ಸಹಿತ ರಾಜ್ಯದ 17 ಜಿಲ್ಲೆಗಳಲ್ಲಿ ಶುಕ್ರವಾರ ಸುರಿದ ಆಕಾಲಿಕ ಮಳೆಯಿಂದ ರಾಜ್ಯಾದ್ಯಂತ ಭಾರೀ ಬೆಳೆನಷ್ಟವಾಗಿದೆ. ಕಾಫಿ, ಕಾಳುಮೆಣಸು, ಮಾವು, ಈರುಳ್ಳಿ ಸೇರಿ 12 ಬೆಳೆಗಳಿಗೆ ಮಳೆಯಿಂದಾಗಿ ತೀವ್ರ ಹೊಡೆತ ಬಿದ್ದಿದ್ದು, ಕೊಡಗು, ಹಾಸನ ಎರಡೇ ಜಿಲ್ಲೆಯಲ್ಲಿ ಸುಮಾರು 700 ಎಕರೆಗೂ ಅಧಿಕ ಕಾಫಿ ಬೆಳೆ ಹಾನಿಯಾಗಿದೆ.

ಕೊಡಗಿನಲ್ಲಿ ಮನೆ, ರಸ್ತೆ, ಗದ್ದೆ, ತೋಟ ಎಲ್ಲೆಲ್ಲೂ ಆಲಿಕಲ್ಲುಗಳ ರಾಶಿ ರಾಶಿಯೇ ಬಿದ್ದಿತ್ತು. ಆಕ್ಷರಶಃ ಕಾಶ್ಮೀರದಂತೆ ಗೋಚರಿಸುತ್ತಿತ್ತು. ಈ ರೀತಿಯಾಗಿ ಆಕಾಲಿಕವಾಗಿ ಸುರಿದ ವಿಪರೀತ ಆಲಿಕಲ್ಲು ಮಳೆಯಿಂದ ಕೊಡಗು ಜಿಲ್ಲೆವೊಂದರಲ್ಲಿಯೇ ಸುಮಾರು 13 ಗ್ರಾಮಗಳಲ್ಲಿ 7 ಬೆಳೆಗಳು ನಷ್ಟಕ್ಕೆ ತುತ್ತಾಗಿವೆ. 12



ಮಳೆ ನಿಂತರೂ ಕರಗದ ಆಲಿಕಲ್ಲು!

ಕೊಡಗು ಜಿಲ್ಲೆ ಅಂಕನಹಳ್ಳಿಯಲ್ಲಿ ಶುಕ್ರವಾರ ಭಾರಿ ಆಲಿಕಲ್ಲು ಮಳೆಯಾಗಿತ್ತು. ಶನಿವಾರ ಮಧ್ಯಾಹ್ನವರೆಗೂ ಮಂಜುಗಡ್ಡೆ ಹಾಗೇ ಉಳಿದಿತ್ತು. ಆಲಿಕಲ್ಲು ನೋಡಿ ಸಂಭ್ರಮಿಸಿದ್ದ ಮಕ್ಕಳು, ಜನರು, ಈವರೆಗೆ ಇಂಥ ಮಳೆ ನೋಡಿಲ್ಲ, ಇಷ್ಟು ಪ್ರಮಾಣದ ಆಲಿಕಲ್ಲು ನೋಡಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

21-02-2021 Kp Pg 02

ಮಾವುವಾದಿಗಳಾಗೋಣ ಬನ್ನಿ!

ಮಾವು ತಿನ್ನುವ ಸುಖ ಬ್ರಹ್ಮಾನಂದಕ್ಕಿಂತಲೂ ಮಿಗಿಲು

ಬಿಸಿಲಕೋಲು
ಹರೀಶ್ ಕೇರ
harish.kera@timesgroup.com



"ಗಾಯೇ, ಚಳಿಗಾಲ ಬಂದಿತೆಂದರೆ ಮತ್ತೆ ವಸಂತ ದೂರ ಉಳಿಯುವುದೇ?'' ಎಂದು ಕವಿ ಪಿ.ಬಿ.ಶೆಲ್ಲಿ ಕೇಳುತ್ತಾನೆ; ನಾವು ಅದನ್ನೇ ಅನುಸರಿಸಿ, ''ಮಾವು ಹೂಬಿಡುವ ಕಾಲ ಬಂದಿತೆಂದರೆ ಹಣ್ಣು ಕೈಗೆ ಸಿಗುವ ಕಾಲ ದೂರವೇ?'' ಎಂದು ಕೇಳಬಹುದು. ಮೊನ್ನೆ ಬಿದ್ದ ಆಲಿಕಲ್ಲು ಸಹಿತ ಮಳೆಗೆ ಮಾವಿನ ಹೂಗಳು ಏನಾಗಿವೆಯೋ ತಿಳಿಯದು. ಫೆಬ್ರವರಿ-ಮಾರ್ಚ್ ಎಂದರೆ ಮಾವಿನ ಹೂಗಳ ಮಾರ್ಚ್‌ಫಾಸ್ಟ್. ಏಪ್ರಿಲ್ ಎಂದರೆ ಮಾವಿನಮಿಡಿ, ಉಪ್ಪಿನಕಾಯಿಯ ಸೀಸನ್. ಮೇ- ಜೂನ್‌ಗಳು ಹಸಿರು- ಹಳದಿ ಬಣ್ಣದ ಹಣ್ಣುಗಳು ಹಾದಿಬೀದಿಯಲ್ಲಿ ಹೊಳೆದು ಕಣ್ಣು ಸೆಳೆಯುವ, ಪರಿಮಳಕ್ಕೆ ಮೂಗರಳುವ ಸಮಯ. ದಿಲ್ಲಿಯ ಮಾವುಪ್ರಿಯ ಕವಿ ಮಿರ್ಜಾ ಗಾಲಿಬ್ ಹೇಳುವ ಹಾಗೆ, ''ಮಾವು, ಅದು ಸಕ್ಕರೆಗಿಂತ ಸುಮಧುರ.'' ಇದು ಮಾವೋವಾದಿಗಳೂ ಮಾವುವಾದಿಗಳಾಗುವ ಕಾಲ.

ಈಗ ಮಾವಿನ ಹೂವಿನ ಪರಿಮಳವನ್ನು ಆಸ್ವಾದಿಸುತ್ತಾ ಹಣ್ಣನ್ನು ಧ್ಯಾನಿಸುವ ಕಾಲ. ಹಣ್ಣಾಗುವುದು ಎಂದರೆ ಮಾಗುವುದು- ಮಾಗಿ ಎಂದೇ ಬದುಕು ಹೇಳುತ್ತದೆ. ಮರ 'ಹಣ್ಣು ಬಿಡು'ವುದು ಎಂದರೆ 'ಫಲ ತ್ಯಾಗ' ಎಂದೇ ಅರ್ಥ; ಮತ್ತು ಅದು ಭಗದ್ಗೀತೆಯಲ್ಲಿ ಉಲ್ಲೇಖಿಸಿದ 'ನಿಷ್ಕಾಮ ಕರ್ಮ, ಫಲತ್ಯಾಗ'ವಲ್ಲದೇ ಬೇರೇನೂ ಅಲ್ಲ ಎಂದು ಸೂತ ಪುರಾಣಿಕರು ಮೊನ್ನೆ ಮಾತಾಡುತ್ತಾ ಹೇಳಿದರು. ಈ ಪುರಾಣಿಕರಿಗೆ ಮಾವಿನ ಹಣ್ಣು ಎಂದರೆ ಜೀವ, ಹಾಗೇ ಮಿಡಿ. ಪ್ರತಿವರ್ಷವೂ ಅಪ್ಪೆ ಮಿಡಿಯನ್ನು ಒಂದು ನಿರ್ದಿಷ್ಟ ಕಡೆಯಿಂದ ತರಿಸಿ ಉಪ್ಪಿನಕಾಯಿ ಹಾಕಿಕೊಳ್ಳುತ್ತಾರೆ. ಅದು ನಿಗದಿತ ಅವಧಿಗಿಂತ ಒಂದು ದಿನವೂ ಹೆಚ್ಚಿಗೆ ಮರದಲ್ಲಿ ಇರಬಾರದು; ಕಡಿಮೆಯೂ ಇರಬಾರದು; ಕೊಯ್ದು ಕೆಡವಬಾರದು, ಇಳಿಸಬೇಕು. ಗಾಯವಾಗಬಾರದು. ಅದರ ತೊಟ್ಟು ಮುರಿದಾಗ ಕನಿಷ್ಠ ಒಂದಡಿಯಾದರೂ ಸೊನೆ ಚಿಮ್ಮಬೇಕು; ಹೀಗೆಲ್ಲ ಇದ್ದ ಮಿಡಿಯನ್ನು ಅವರು ಕದ್ದಾದರೂ ಮೆದ್ದೇ ಸಿದ್ಧ. ಮಿಡಿ ಎಂದರೆ ಏನು ಗೊತ್ತೇ? ಅದು ಮಿಡಿಯುವುದು ಎಂಬುದರ ಹ್ರಸ್ವ ರೂಪ, ಅದನ್ನು ಸವಿದಾಗ ಸವಿದವರಲ್ಲಿ ಸಕಲ ಜೀವಜಾತಕ್ಕಾಗಿ ಮಿಡಿಯುವ ಗುಣವನ್ನು ಉದ್ದೀಪಿಸುವುದರಿಂದ ಆ ಹೆಸರು. ಹಾಗೇ ಅದು ಹೆಣ್ಣುಮಕ್ಕಳ 'ಮಿಡಿ'ಯಂತೆಯೂ ಹೌದು. ಮಿಡಿ ಧರಿಸಿದವರನ್ನು ಕಂಡರೆ ನಮಗೆ ಬಹಳ ಇಷ್ಟವಪ್ಪಾ ಎಂದು ಚಟಾಕಿ ಹಾರಿಸಿದರು. ಈ ಪುರಾಣಿಕರು ಬಲೇ ತಮಾಷೆ ನೋಡಿ.

ಮಾವಿನ ಹಣ್ಣನ್ನು ತಿನ್ನುವ ಹಲವು ರೀತಿಗಳಿವೆ. ಸುಸಂಸ್ಕೃತರೆನ್ನಿಸಿಕೊಂಡವರು ಅದನ್ನು ನೀಟಾಗಿ ಕತ್ತರಿಸಿ ಚೌಕಾಕಾರದ ಹೋಳುಗಳಾಗಿ ಮಾಡಿ, ತಟ್ಟೆಯಲ್ಲಿಟ್ಟು ಒಂದೊಂದನ್ನೇ ತುಟಿಗೆ ತುಟಿಗೆ ತಾಕಿಸದಂತೆ ಮೆದ್ದು ಎದ್ದು ಹೋಗುತ್ತಾರೆ. ಇವರು ಸುಸಂಸ್ಕೃತರಲ್ಲವೇ ಅಲ್ಲ, ಪಾಪಿಗಳು. ಇವರಿಗೆ ನರಕವೇ ಸರಿ. ಮಾವಿನ ಹಣ್ಣು ತಿನ್ನುವುದು ಹಾಗಲ್ಲ. ತೊಟ್ಟನ್ನು ಹಲ್ಲಿನಿಂದ ಕಚ್ಚಿ ತೆಗೆದು, ಸಿಪ್ಪೆಯನ್ನು ಎಳೆದು ತೆಗೆದು ಅದಕ್ಕೆ ಹಿಡಿದುಕೊಂಡ ತಿರುಳನ್ನೂ ಸೀಪಿ ಸೀಪಿ ತಿಂದು, ನಂತರ ಹಣ್ಣಿನ ಮುಖ್ಯ ಭಾಗಕ್ಕೆ ಹಲ್ಲನ್ನು ನಾಟಿಸಿ ಆಳಕ್ಕೆ ಊರಿ, ಪ್ರಣಯದ ಅನುಭವದಷ್ಟೇ ಆನಂದದ ರಸೋತ್ಕರ್ಷ ಅನುಭವಿಸುತ್ತಾ ತಾದಾತ್ಮ್ಯದಿಂದ ಅದನ್ನು ಆಸ್ವಾದಿಸಬೇಕು. ತುಟಿಗಳಿಗೂ ಮೂಗಿಗೂ ಎರಡೂ ಕೈಗಳಿಗೂ ಹಣ್ಣಿನ ರಸ ಅಂಟಿಕೊಂಡರೆ ನೀವು ಹಣ್ಣು ತಿನ್ನುವುದರಲ್ಲಿ ಪ್ರವೀಣರು; ಅಂಗಿಯಲ್ಲಿ ಹಣ್ಣಿನ ರಸದ ನಾಲ್ಕಾರು ಕಲೆ ಉಂಟಾದರೆ ಅದು ಭಲೇ ಭೇಷ್. ಉಪನಿಷತ್ತಿನಲ್ಲಿ ಕಾವ್ಯಾನಂದವನ್ನು ಬ್ರಹ್ಮಾನಂದದ ಸಹೋದರ ಎಂದಿದ್ದಾರೆ; ಮಾವುಫಲಾಸ್ವಾದಾನಂದ ಅದಕ್ಕಿಂತಲೂ ಒಂದು ಮಡಿ ಮಿಗಿಲು.

ನಮ್ಮ ಕತೆ ಬಿಡಿ; ಕನ್ನಡದ ಆದಿಕವಿಗಳಿಗೇ ಮಾವಿನ ಗೀಳು ಹಿಡಿದುಕೊಂಡಿತ್ತು. ಅದಕ್ಕೆ ನಿದರ್ಶನ ಈ ಪದ್ಯ: ''ತಳರೊಳ್ ನೀನೆ ಬೆಡಂಗನ್ನೆ, ನನೆಗಳೊಳ್ ನೀಂ ನಿಳನ್ನೆ, ಪುಷ್ಪ ಸಂಕುಳದೊಳ್ ನೀನೆ ವಿಳಾಸಿಯ್ಯೆ, ಮಿಡಿಗಳೊಳ್ ನೀಂ ಚೆಲ್ವನ್ನೆ, ಪಣ್ಣ ಪಣ್ಣಿನ್ ಒವೋ ಪೆರತೇನೋ ನೀನೆ ಭುವನಕ್ಕಾದಾರನ್ನೆ, ಭಂಗ ಕೋಕಿಳ ಕೀರ ಪ್ರಿಯ ಚೂತ ರಾಜ, ತರುಗಳ್ ನಿನ್ನಂತೆ ಚೆನ್ನಂಗಳೇ''- ಮಾವು ತರುಗಳಿಗೆಲ್ಲ ರಾಜ ಎಂಬುದು ಪಂಪನ ಅಭಿಪ್ರಾಯ. ತನ್ನ ಹುಟ್ಟೂರು ಬನವಾಸಿಯನ್ನು ಬಣ್ಣಿಸುವ ಪದ್ಯಗಳಲ್ಲಿ ಆತ 'ಸೊಗಯಿಸಿ ಬಂದ ಮಾಮರನೆ ತಳ್ಕಲೆವಳ್ಳಿಯೆ...' ಎಂದೇ ಆರಂಭಿಸುತ್ತಾನೆ. ಮಲ್ಲಿಕಾರ್ಜುನ ಕವಿ 'ಸೂಕ್ತಿ ಸುಧಾರ್ಣವ'ದಲ್ಲಿ ''ಎಳೆ ಗಿಳಿವಿಂಡಿನೋದುವ ಮರಂ, ಭ್ರಮರಂಗಳ ಗೀತಶಾಲೆ, ಕೆಂದಳಿರ್ಗಳ ಜನ್ಮಭೂಮಿ, ವನಲಕ್ಷ್ಮಿಯ ಪೆರ್ಮಗನೋತಗಲ್ವ ಕೋಮಳೆಯರ ಜೂಜ, ಭೂತಳದ ಕಲ್ಪಕುಜಂ, ಸಕಲಾವನೀರುಹಂಗಳ ತಲೆನಾಯಕಂ, ತುರುಗಿ ಬಂದುದು ಚೂತಕುಜಂ ವಸಂತ ದೊಳ್,'' ಎಂದೆಲ್ಲ ಬಣ್ಣಿಸುತ್ತಾನೆ. 'ಸರ್ವಾಂಗಸೌಂದರಂ ಮಾವೆಲ್ಲಂ' ಎಂಬುದು ನಾಗವರ್ಮನ ನುಡಿ. ವಸಂತಕ್ಕೂ ಮಾವಿಗೂ ಕಾಮಕ್ಕೂ ವಿಶಿಷ್ಟ ಸಂಬಂಧ. ಕಾಮದೇವತೆ ಮನ್ಮಥನ ಐದು ಬಾಣಗಳಲ್ಲಿ ಒಂದು ಚೂತವೇ. ವಸಂತದಲ್ಲಿ ಚೂತ ಚಿಗುರಿ ಕೋಗಿಲೆಗೆ ಸೂಪರ್ ಆದ ಮೌತ್ ವಾಶ್ ಆಗಿ ಅದರ ದನಿಗೆ ಇನಿದಾಗುವಂತೆ ಮಾಡುತ್ತದೆ. 'ಮಾಮರಗಳೆಂಬ ಆನೆಗಳ ಸೇನೆಯ ಮೇಲೆ ಕುಳಿತ ವಸಂತ ನೃಪಾಲನು ಪಾಂಡು ಮಹಾರಾಜನ ಮೇಲೆ ದಿಗ್ವಿಜಯ ಸಾಧಿಸಿದ' ಎಂದು ಉದ್ಗರಿಸುತ್ತಾನೆ ಕುಮಾರವ್ಯಾಸ.

ನಾವು ಹೆಮ್ಮೆ ಪಡಬಹುದಾದ್ದು ಏನೆಂದರೆ, ಮಾವು ನಮ್ಮ ಸ್ವಂತದ್ದು ಎಂಬುದು. ನಾವು ಜಗತ್ತಿಗೆ ಸೊನ್ನೆ ಕೊಟ್ಟಂತೆ ಮಾವನ್ನೂ ಕೊಟ್ಟೆವು. ಅವರು ನಮಗೆ ಓಟೆ ಕೊಟ್ಟರು, ಆ ಮಾತು ಬೇರೆ. ಅದಕ್ಕೇ ಇದರ ಹೆಸರು ಸಸ್ಯಶಾಸ್ತ್ರೀಯ ಹೆಸರು 'ಮ್ಯಾಂಜಿಫೆರಾ ಇಂಡಿಕಾ.' ಇಂದಿಗೂ ಜಗತ್ತಿನ ಮಾವು ಉತ್ಪಾದನೆಯಲ್ಲಿ ಅರ್ಧ ಭಾಗ ಭಾರತದ್ದೇ. ಮೊದಲು ಇಲ್ಲಿ ಕಾಡು ಮಾವಿನ ಹಣ್ಣಿನ ವೈವಿಧ್ಯವಿತ್ತು. ಮೊಘಲರು ಮತ್ತು ವಿದೇಶೀಯರು ಇಲ್ಲಿನ ಮಾವಿಗೆ ನಾನಾ ಬಗೆಯ ಕಸಿಯನ್ನು ಮಾಡಿ ದೊಡ್ಡ ಜಾತಿಯ ವೈವಿಧ್ಯಮಯ ಹಣ್ಣುಗಳನ್ನು ಸೃಷ್ಟಿಸಿದರು. ಕಾಡು ಮಾವುಗಳು ಮಾಯವಾದವು. ಆದರೆ ಒಳ್ಳೆಯ ಮಿಡಿ ಉಪ್ಪಿನಕಾಯಿಗೆ ಈಗಲೂ ಸಣ್ಣ ಕಾಡು ಮಾವೇ ಬೇಕು. ಮೊಘಲರಲ್ಲಿ ಅಕ್ಬರ್ ದೊಡ್ಡ ಮಾವಿನ ಉದ್ಯಾನವನ್ನೇ ಸೃಷ್ಟಿಸಿದನಂತೆ. ಬುದ್ಧ ಮಾವಿನ ಮರದ ಕೆಳಗೆ ಧ್ಯಾನ ಮಾಡಿದನಂತೆ ಎಂಬುದೆಲ್ಲ ಇತಿಹಾಸದ ಕತೆಗಳು. ಇಂಗ್ಲಿಷ್‌ನ 'ಮ್ಯಾಂಗೋ' ಹುಟ್ಟಿದ್ದು ಕೂಡ ತಮಿಳಿನ 'ಮಾಂಗಾಯ್'ನಿಂದ ಎಂಬುದು ಒಂದು ವಾದ. ಎಲ್ಲಿಂದಲಾದರೂ ಹುಟ್ಟಿರಲಿ, ಎಲ್ಲಾದರೂ ಬೆಳೆಯಲಿ, ನಮ್ಮ ನಾಲಿಗೆ ಸೇರಲಿ ಎಂಬುದಷ್ಟೇ ರಸಿಕ ಮಾವುವಾದಿಗಳ ಆಪೇಕ್ಷೆ.

21-02-2021 Vk Pg 02